ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಕಿ.ಇಂ/ಕ.ದೃಢೀಕರಣ ಪತ್ರ/2025-26/ 69 ದಿನಾಂಕ: 29/04/2025

ರವರಿಗೆ,

Principal's
KLE Society's S. Nijalingappa College,
2nd Block Rajajinagara,
Bangalore – 560010.

ಮಾನ್ಯರೆ,

ವಿಷಯ: ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ: 1. ತಮ್ಮ ಮನವಿ ಪತ್ರ ದಿನಾಂಕ: 26.03.2024
2. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022
3. ಈ ಕಛೇರಿ ಪತ್ರ ಸಂಖ್ಯೆ: 2023-24/ 1543 ದಿನಾಂಕ: 27.03.2024
4. ತಮ್ಮ ಮನವಿ ಪತ್ರ ದಿನಾಂಕ: 15.04.2025

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, KLE Society, Bangalore ವತಿಯಿಂದ ನಡೆಸುತ್ತಿರುವ KLES Nijalingappa College, KLE Society's School, KLE College of Pharmacy, KLE Society's Independent P U. College, 28th Cross Road, 2nd Block, Rajajinagara, Bangalore ಇಲ್ಲಿನ ಕಟ್ಟಡಗಳಿಗೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖಿತ (1)ರ ಪತ್ರದಲ್ಲಿ ಮನವಿ ಸಲ್ಲಿಸಿದ್ದು, ಅದರಂತೆ, ಸದರಿ ಕಟ್ಟಡದ ಪರಿವೀಕ್ಷಣೆ ಕೈಗೊಂಡು ಉಲ್ಲೇಖ (3)ರ ಈ ಕಛೇರಿ ಪತ್ರದಲ್ಲಿ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (4) ರ ಮನವಿ ಪತ್ರದಲ್ಲಿ ಈಗಾಗಲೇ ನೀಡಿರುವ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಿಸಿ ಕೊಡುವಂತೆ ಕೋರಿರುತ್ತೀರಿ.

ಅದರಂತೆ, KLE Society, Bangalore ವತಿಯಿಂದ ನಡೆಸುತ್ತಿರುವ KLES Nijalingappa College, KLE Society's School, KLE College of Pharmacy, KLE Society's Independent P.U. College, 28th Cross Road, 2nd Block, Rajajinagara, Bangalore ಇಲ್ಲಿನ ಕಟ್ಟಡಗಳನ್ನು ದಿನಾಂಕ: 28.04.2025 ರಂದು ಸಂಬಂಧಪಟ್ಟ ಇಂಜಿನಿಯರ್ ಹಾಗೂ Smt. Sharmistha Roy, Principal ರವರೊಂದಿಗೆ ಕಟ್ಟಡದ ಒಳಭಾಗ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಕಟ್ಟಡವನ್ನು 2002 ರಲ್ಲಿ ತಳ+ನೆಲ ಮಹಡಿಯೊಂದಿಗೆ 05 ಅಂತಸ್ತಿನ ಕಟ್ಟಡವನ್ನು ಹೊಂದಿದ್ದು, ಟೆರೆಸ್‌ಗೆ ಲೈಟ್ ರೂಫಿಂಗ್ ಅಳವಡಿಸಲಾಗಿರುತ್ತದೆ. ಕಟ್ಟಡವು ವಿಟ್ರಿಫೈಡ್ ನೆಲಹಾಸು, ಯು.ಪಿ.ವಿ.ಸಿ. ಕಿಟಕಿಗಳು ಮತ್ತು ಮರದ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಕಟ್ಟಡದಲ್ಲಿ 34 ಕ್ಲಾಸ್ ರೂಮ್‌ಗಳು, 12 ಇತರೆ ಕೊಠಡಿಗಳೊಂದಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ.

ಕಟ್ಟಡಕ್ಕೆ ಸಂಬಂಧಪಟ್ಟ ಕಾಂಕ್ರೀಟ್ ಗ್ರೇಡ್, ಸ್ಟೀಲ್, ಸಿಮೆಂಟ್, ಮರಳು ಇತ್ಯಾದಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಳವಡಿಸುವ ಸಾಮಾಗ್ರಿಗಳ ಪರೀಕ್ಷೆ ವರದಿಗಳು ಇಲ್ಲದಿರುವ ಕಾರಣದಿಂದ ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರಡು ರೀತಿಯ Non Destructive test ಗಳನ್ನು ಶಾಲೆಯ ವತಿಯಿಂದ ಕೈಗೊಂಡು ಮನವಿ ಪತ್ರದೊಂದಿಗೆ ಸಲ್ಲಿಸಿರುತ್ತೀರಿ.

ಮುಂದುವರೆದು, ಮುಂದುವರೆದು, Karnataka Material Test House, No. 778/44, 8th Cross, Triveni Road, Gokul 1st Stage, 2nd Phase, Bangalore ಇವರಿಂದ N.D. Test ಗಳನ್ನು ಕೈಗೊಳ್ಳಲಾಗಿದ್ದು,

(Report No. KTH/Report No: 1847-0803/2023-24) ರವರಿಂದ ಪರೀಕ್ಷಿಸಿ ವರದಿಯಲ್ಲಿ The proper maintenance of the existing buildings is to be maintained. Hence, it is concluded that the structure is in sound Condition. ಎಂದು ದೃಢೀಕರಿಸಿರುತ್ತಾರೆ.

ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸುತ್ತೀರಿ.

1. As built Drawing
2. Ultrasonic Pulse Velocity Test Report
3. Rebound Hammer Test result.

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ / ಕಾಲೇಜಿಗೆ – ರೂ. 5,000.00 ಗಳನ್ನು ರುಜುವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR00425005900801307 dtd. 28.05.2025 ರಲ್ಲಿ ರೂ. 5,000.00 ಗಳನ್ನು ಪಾವತಿಸಿರುತ್ತಾರೆ.

ಸದರಿ ಕಟ್ಟಡದ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು ಈ ಸಂದರ್ಭದಲ್ಲಿ. ಯಾವುದೇ ಬಿರುಕುಗಳಾಗಲಿ ಅಥವಾ Dampness ಗಳಾಗಲಿ ಕಂಡುಬಂದಿರುವುದಿಲ್ಲ. ಹಾಗೂ ಕಟ್ಟಡದ ನಿರ್ವಹಣೆ ಮಾಡುವ ಜವಬ್ದಾರಿಯು ಸದರಿ ಸಂಸ್ಥೆಯವರದಾಗಿರುತ್ತದೆ ಮತ್ತು ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಪರತ್ತಿಗೊಳಪಟ್ಟಿರುತ್ತದೆ.

ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಇದ್ದರಿಂದ ಸದರಿ ಪ್ರಮಾಣ ಪತ್ರವನ್ನು KLE Society, Bangalore ವತ್ತಿಯಿಂದ ನಡೆಸುತ್ತಿರುವ KLES Nijalingappa College, KLE Society's School, KLE College of Pharmacy, KLE Society's Independent P.U. College, 28th Cross Road, 2nd Block, Rajajinagara, Bangalore ಇಲ್ಲಿನ ಕಟ್ಟಡಗಳಿಗೆ ತಾವುಗಳು ಈ ಹಿಂದೆ ಸಲ್ಲಿಸಿರುವ ಪರೀಕ್ಷಾ ವರದಿಗಳ ಆಧಾರದ ಮೇಲೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ನಂ.4 ಕಟ್ಟಡಗಳ ಉಪವಿಭಾಗ,
ಸಂ 4, ಕಟ್ಟಡಗಳ ಸಮೀಕ್ಷೆ-ವಿಭಾಗ
ಬೆಂಗಳೂರು -560001